**ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

ಸ್ಪೆಷಲ್ ಕೇಸ್ ನಂಃ 56/2023 ಪಿ.ಡಬ್ಲ್ಯೂಃ 3

ಸಿ.ಡಬ್ಲ್ಯೂಃ 5

| | |
|---|---|
| ಸಾಕ್ಷಿದಾರರ ಹೆಸರು | ಅನಿಲ್ |
| ತಂದೆಯ ಹೆಸರು | ಬೊಗ್ಗು |
| ವಯಸ್ಸು | 33 ವರ್ಷ |
| ಉದ್ಯೋಗ | ಅಟೋ ಚಾಲಕ |
| ವಿಳಾಸ | ಗುಜ್ಜರಬೆಟ್ಟು |

ದಿನಾಂಕಃ 28-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ಚಾಸಾ-1 ನನಗೆ ನೋಡಿ ಗೊತ್ತು. ನನಗೆ ಚಾಸಾ-3 ಗೊತ್ತು, ಆತನಿಗೆ ಸನ್ಯಾಸಿ ಮಠದ ಬಳಿ ದಿನಸಿ ಅಂಗಡಿ ಇದೆ. ನಾನು ಅವರ ಅಂಗಡಿಯ ಬಳಿ ಕ್ರಿಕೆಟ್ ಆಡಲು ಹೋಗುತ್ತಿದ್ದೆ. ತಾರೀಕು 16-06-2023 ರಂದು ಸಂಜೆ 7.00 ಗಂಟೆಯ ಸಮಯದಲ್ಲಿ ನಾನು, ಚಾಸಾ-9 ಮತ್ತು ಇತರ ಸ್ನೇಹಿತರು ಕ್ರಿಕೆಟ್ ಆಟ ಆಡಿ ಕುಳಿತುಕೊಂಡಿದ್ದೆವು. ಸಂಜೆ ಸುಮಾರು 7.15 ಗಂಟೆಯ ಸಮಯದಲ್ಲಿ ಚಾಸಾ-3 ಇವರ ಅಂಗಡಿಯಿಂದ ಗಲಾಟೆ ಶಬ್ದ ಕೇಳಿತು. ಆಗ ನಾನು ಮತ್ತು ನನ್ನ ಸ್ನೇಹಿತರು ಅಲ್ಲಿಗೆ ಹೋಗಿದ್ದೆವು. ನಾನು ಅಲ್ಲಿ ನೋಡಿದಾಗ ಚಾಸಾ-1 ಈತನನ್ನು ಇಬ್ಬರು ಜನ ಅಂಗಡಿಯಿಂದ ಎಳೆದುಕೊಂಡು ಬರುತ್ತಿದ್ದರು. ಚಾಸಾ-1 ಈತನನ್ನು ಅಂಗಡಿಯಿಂದ ಹೊರಗೆ ಕರೆತಂದು, ಹೊರಗೆ ಇದ್ದ ಇನ್ನೂ ಮೂರು ಜನ ಸೇರಿ ಹೊಡೆದಿದ್ದರು. ನಂತರ ಚಾಸಾ-1 ಈತನನ್ನು ಇಬ್ಬರು ಸ್ಕೂಟರ್ ನಲ್ಲಿ ಕುಳ್ಳಿರಿಸಿಕೊಂಡು ಹಂಪನಕಟ್ಟೆ ಕಡೆಗೆ ಹೋಗಿದ್ದರು. ಪೊಲೀಸರು ಈ ಘಟನೆಗಾಗಿ ವಿಚಾರಿಸಿಲ್ಲ. ಆದಿನ ಚಾಸಾ-1 ಈತನನ್ನು ಯಾರು ಹೊರಗೆ ಕರತಂದಿದ್ದರು ಎಂದು ಗುರುತಿಸಿಲ್ಲ. ನನಗೆ ಅವರ ಪರಿಚಯ ಇರಲಿಲ್ಲ. ಚಾಸಾ-1 ಈತನಿಗೆ ಹಲ್ಲೆ ಮಾಡಿದವರು ಯಾರು ಎಂದು ಸಹ

ಗೊತ್ತಿಲ್ಲ. ಆದಿನ ಆ ಘಟನೆಗಿಂತ ಮೊದಲು ಮತ್ತು ನಂತರ ಏನಾಗಿತ್ತು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ನಂತರ ಚಾಸಾ-1 ಕೊಟ್ಟ ದೂರಿನ ಮೇಲೆ ಕೇಸ್ ಆಗಿರುವುದು ತಿಳಿದಿತ್ತು.

2) ನಂತರ ನಾನು ಹಲ್ಲೆ ಮಾಡಿದವರನ್ನು ನೋಡಿ ಗುರುತಿಸಿಲ್ಲ. ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿ ಮಾತ್ರವೇ ಗೊತ್ತು. 1 ನೇ ಆರೋಪಿ ತೊಟ್ಟಂ ಕಡೆಯವರು ಎಂದು ಗೊತ್ತು. 2 ನೇ ಆರೋಪಿಯನ್ನು ನಾನು ಈ ಮೊದಲು ನೋಡಿಲ್ಲ.

**( ಈ ಹಂತದಲ್ಲಿ ಸರಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಸರಕಾರಿ ಅಭಿಯೋಜಕರಿಗೆ ಅನುಮತಿ ಕೊಡಲಾಯಿತು)**

**ಪಾಟಿಸವಾಲು: ಸರಕಾರಿ ಅಭಿಯೋಜಕರಿಂದ:**

1) ತಾರೀಕು 16-06-2023 ರಂದು ಸಂಜೆ 7.15 ಗಂಟೆಗೆ 1 ನೇ ಆರೋಪಿ ಮತ್ತು ಶಶಾಂಕ್ ಕೊಳ ಎಂಬ ಹುಡುಗ ಚಾಸಾ-1 ಈತನನ್ನು, ಚಾಸಾ-3 ಇವರ ಅಂಗಡಿಯಿಂದ ಹೊರಗೆ ಕರೆದುಕೊಂಡು ಬರುತ್ತಿದ್ದರು ಎಂದರೆ ನಿಜ. ಆಗ ಅಲ್ಲಿ 2 ನೇ ಆರೋಪಿ, ಶಶಾಂಕ್ ಬಾಪುತೋಟ ಮತ್ತು ಧ್ರುವ ಎಂಬ ಹುಡುಗರು ಇದ್ದರು ಎಂದರೆ ನಿಜ. ಅಲ್ಲಿ ಐದು ಜನ ಸೇರಿ ಚಾಸಾ-1 ಈತನಿಗೆ ಹಲ್ಲೆ ಮಾಡಿದ್ದರು ಎಂದರೆ ನಿಜ. 1 ನೇ ಆರೋಪಿ, ಮತ್ತು ಶಶಾಂಕ್ ಬಾಪುತೋಟ ಎನ್ನುವವರು ಚಾಸಾ-1 ಈತನನ್ನು ಆತನ ಸ್ಕೂಟರ್ ನಲ್ಲಿ ಕುಳ್ಳಿರಿಸಿಕೊಂಡು ಹಂಪನಕಟ್ಟೆ ಕಡೆಗೆ ಹೋಗಿದ್ದರು ಎಂದರೆ ನಿಜ. ನಂತರ ಹಂಪನಕಟ್ಟೆಯಲ್ಲಿಯೂ ಸಹ ಆರೋಪಿತರು ಚಾಸಾ-1 ಈತನಿಗೆ ಹಲ್ಲೆ ಮಾಡಿದ್ದರು ಎಂದು ನನಗೆ ನಂತರ ತಿಳಿದಿತ್ತು ಎಂದರೆ ನಿಜ. ಮಾರನೇ ದಿನ ನನಗೆ ಆರೋಪಿ ಮತ್ತು ಚಾಸಾ-1 ಇವರು, ಚಾಸಾ-3 ಇವರ ಅಂಗಡಿಗೆ ಬರುವ ಮೊದಲು ಪೊಟ್ಟಳಿವೆ ಬೀಚ್ ನಲ್ಲಿ ಸಿಗರೇಟ್ ವಿಚಾರವಾಗಿ ಗಲಾಟೆಯಾಗಿ, ಹಲ್ಲೆ ಮಾಡಿದ ವಿಚಾರವಾಗಿ, ಚಾಸಾ-1 ಈತನನ್ನು ಅಟ್ಟಿಸಿಕೊಂಡು ಬಂದಿದ್ದರು ಎಂದು ತಿಳಿದಿತ್ತು ಎಂದರೆ ನಿಜ.

2) ಈ ಘಟನೆಯಾದ ಸುಮಾರು 1 ತಿಂಗಳ ನಂತರ ಡಿ.ವೈ.ಎಸ್ ಪಿ ಕಚೇರಿಗೆ ಕರೆಯಿಸಿ 2 ನೇ ಆರೋಪಿ ಮತ್ತು 3 ಜನ ಬಾಲಪರಾಧಿಗಳನ್ನು ತೋರಿಸಿ, ಅವರನ್ನು ಗುರುತಿಸಿದ್ದಕ್ಕಾಗಿ ತಾರೀಕು 21-07-2023 ರಂದು ಈಗ ಓದಿದ ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು **ನಿಶಾನೆ ಪಿ-15** ಎಂದು ಗುರುತಿಸಿದೆ. ನನಗೆ 2 ನೇ ಆರೋಪಿ ಮತ್ತು ಆತನಿಗೆ ಹಲ್ಲೆ ಮಾಡಿದ ಉಳಿದ ಮೂವರ ಪರಿಚಯ ಇದೆ ಎಂದರೆ ಸರಿಯಲ್ಲ. ನನಗೆ ಹಲ್ಲೆ ಮಾಡಿದ 4 ಜನ ಆರೋಪಿತರ ಪರಿಚಯ ಇದ್ದರೂ, ಅವರ ಪರಿಚಯ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಆರೋಪಿತರ ಪರವಾಗಿ ಪಾಟೀಸವಾಲುಃ ಶ್ರೀ ಎಸ್.ಎ. ವಕೀಲರಿಂದ</u>**

1) ನಾವು ಕ್ರಿಕೆಟ್ ಆಡುವ ಮೈದಾನ ಚಾಸಾ-3 ಇವರ ಅಂಗಡಿಯಿಂದ 200 ಅಡಿಗಳ ಅಂತರ. ಕ್ರಿಕೆಟ್ ಮುಗಿಸಿದ ಸುಮಾರು ಕಾಲು ಗಂಟೆಯ ನಂತರ ಗಲಾಟೆ ಕೇಳಿತ್ತು. ಆದಿನ ಚಾಸಾ-3 ಇವರ ಅಂಗಡಿಯ ಬಳಿ ಸುಮಾರು 30 – 40 ಜನ ಸೇರಿರಬಹುದು. ಚಾಸಾ-3 ಇವರ ಅಂಗಡಿಯ ಎದುರಿನಲ್ಲಿ ಆ ಸಮಯದಲ್ಲಿ ಕತ್ತಲು ಇತ್ತು ಎಂದರೆ ನಿಜ. ಆದಿನ ಕತ್ತಲಾಗಿದ್ದರಿಂದ ನೋಡಿಲ್ಲ ಎಂದರೆ ಸರಿಯಲ್ಲ. ಆದಿನ ಅವರು ಕರೆದುಕೊಂಡು ಹೋಗಿದ್ದರು. ನಾವು ಅಲ್ಲಿಗೆ ಬಂದಾಗ ಚಾಸಾ-1 ಈತನನ್ನು ಸ್ಕೂಟಿಯಲ್ಲಿ ಕುಳ್ಳಿರಿಸುತ್ತಿದ್ದರು. ನಾನು ಅಲ್ಲಿ ಯಾವುದೇ ವಿಚಾರವನ್ನು ಕೇಳಿಲ್ಲ. ಅವರು ಎಲ್ಲಿ ಹೋದರು, ಏನಾಗಿತ್ತು ಎಂದು ಆಗ ನನಗೆ ತಿಳಿದಿಲ್ಲ.

2) ಆದಿನ ಬೀಚ್ ನಲ್ಲಿ ಏನು ಗಲಾಟೆ ಆಗಿತ್ತು ಎಂದು ನನಗೆ ಸ್ವತಃ ಗೊತ್ತಿಲ್ಲ. ನನಗೆ ಆದಿನ ಉಳಿದ ವಿಚಾರವನ್ನು ಬೇರೆಯವರು ಹೇಳಿಲ್ಲ ಎಂದರೆ ಸರಿಯಲ್ಲ. ಚಾಸಾ-1 ಈತನನ್ನು ಉಪಚಾರಕ್ಕಾಗಿ ಸೇರಿಸಿದ್ದ ಬಗ್ಗೆ ನನಗೆ ಸ್ನೇಹಿತನಿಂದ ತಿಳಿದಿತ್ತು. ನಾನು ಚಾಸಾ-3 ಇವರ ಅಂಗಡಿ ಬಳಿ ಸುಮಾರು 10 – 15 ನಿಮಿಷಗಳ ಕಾಲ ಇದ್ದೆ. ನಾವು ಚಾಸಾ-3 ಇವರ ಅಂಗಡಿಯ ಬಳಿ ಹೋದ ಸುಮಾರು 10 ನಿಮಿಷದ ನಂತರ ಚಾಸಾ-1 ಈತನನ್ನು ಕರೆದುಕೊಂಡು ಹೋಗಿದ್ದರು. ಆ ಸಮಯದಲ್ಲಿ ಅಲ್ಲಿ ಯಾರು, ಯಾರು ಇದ್ದರು ಎಂದು ಈಗ ನೆನಪಿಲ್ಲ. ನನಗೆ ಚಾಸಾ-1 ಬೇಕಾಗಿರುವ ವ್ಯಕ್ತಿ

ಆಗಿದ್ದರಿಂದ ಆತನಿಗೆ ಸಹಾಯ ಮಾಡಲು ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದಿನ ಆರೋಪಿತರು ಚಾಸಾ-1 ಈತನನ್ನು ಅಲ್ಲಿಂದು ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ -**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್.ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.